1/5

# ANSWER KEY

## FIRST YEAR HIGHER SECONDARY EXAMINATION MARCH 2025

## PART - II

## SUBJECT: KANNADA (LANGUAGE)

**CODE:** FY 306 **VERSION:** C

**80 SCORES** **2½ HOURS**

| ಕ್ರಮ ಸಂಖ್ಯೆ | ಉತ್ತರ ಸೂಚಕ | ಅಂಕ | ಒಟ್ಟು ಅಂಕಗಳು |
|---|---|---|---|
| 1 | a) ಕಡಲು<br>b) ರಾಜಗೀಜ, ತಲೆಗಿಲೆ ಇತ್ಯಾದಿ<br>c) ಕಡಲ+ಒಳಗಿನ, ಮೇಲೆ+ಇರುವುದಕ್ಕಿಂತಲೂ<br>d) ಭೂಮಿ- ಇಳೆ, ಧರಣಿ, ಮೇದಿನಿ ಇತ್ಯಾದಿ<br>e) ತಾಯಿಗೆ | 1<br>2<br>2<br>2<br>1 | 8 |
| 2 | ಲೋಕ ಪ್ರಸಿದ್ಧಿಯ ಜಯದಲಿ ಎಂದ- ಬ್ಲೆನ್ ಹೀಮ್ ಕದನ<br>ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು- ಮಂಕುತಿಮ್ಮನ ಕಗ್ಗ<br>ಪಾಪದ ಕೊಡ ತುಂಬಿದ ಜಗ ಪ್ರಳಯ- ಸುನಾಮಿಯ ಹಾಡು<br>ಶಾಂತಿ ರಸವೇ ಪ್ರೀತಿಯಿಂದ ಮೈದೋರಿತಣ್ಣಾ- ಇದು ಬರಿ ಬೆಳಗಲ್ಲೋ ಅಣ್ಣಾ | 4 | 4 |
| 3 | ಆಯ್ದಕ್ಕಿ ಲಕ್ಕಮ್ಮ | 1 | 1 |
| 4 | ಶ್ರೀರಾಮಾಯಣದರ್ಶನಂ | 1 | 1 |
| 5 | ಕರ್ಣ | 1 | 1 |
| 6 | ಬಕ | 1 | 1 |
| 7 | ಸಣ್ಣಕಥೆ | 1 | 1 |
| 8 | ಸಗ್ಗ, ಅಚ್ಚರಿ | 2 | 2 |
| 9 | ಇಂಗಿ ಹೋಗಲಿ, ಹೊಳೆಯ ದಡ | 2 | 2 |
| 10 | ಭೂತಾರಾಧನೆಯು ಸಮಷ್ಟಿ ಕಲೆಯಾಗಿದೆ. ಇದು ಸಾಮೂಹಿಕ ಪಾಲ್ಗೊಳ್ಳುವಿಕೆಯ ಆರಾಧನೆಯೆಂದು ಪರಿಗಣಿಸಬೇಕಾಗುತ್ತದೆ. | 2 | 2 |
| 11 | ಸಾಮಾಜಿಕ, ಪಾರಂಪರಿಕ | 2 | 2 |
| 12 | ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಸೂಕ್ತವಾದ ವಾಕ್ಯವನ್ನು ರಚಿಸಲಾಗಿದೆ. | 2 | 2 |
| 13 | ಅಸಮರ್ಥ, ಅಶಕ್ತ | 2 | 2 |
| 14 | ಆಮ್ಲಜನಕದ ಸಿಲಿಂಡರನ್ನು ಬೆನ್ನಿಗೆ ಕಟ್ಟಿಕೊಂಡು ಈಜುಡುಗೆಯಲ್ಲಿ ನೀರಿನ | 2 | 2 |

| | | | |
|---|---|---|---|
| | ಆಳಕ್ಕೆ ಹೋಗುವುದಿಲ್ಲ - | | |
| 15 | ಮಕ್ಕಳಿಬ್ಬರ ಧೈರ್ಯಕ್ಕೆ ಮೆಚ್ಚಿದ ರಾಜನು ಬೆರಗಾಗಿ ಇವರು ಧೀರರು, ಇಂತಹವರನ್ನು ನಾನು ಹಿಂದೆಂದೂ ನೋಡಿರಲಿಲ್ಲ ಎನ್ನುತ್ತಾನೆ. ……. .. | 2 | 2 |
| 16 | ಜಲ ಸಂರಕ್ಷಣೆಯ ಮಹತ್ವವನ್ನು ಸಾರುವ ಎರಡು ಘೋಷಣ ವಾಕ್ಯಗಳನ್ನು ಬರೆದಿರಬೇಕು. | 2 | 2 |
| 17 | ಜರಾಸಂಧ, ರಾವಣ, ವಾಲಿ, ಕಂಸ ಇತ್ಯಾದಿ | 2 | 2 |
| 18 | ಪ್ರಳಯದ ಭೀಕರತೆಯನ್ನು ವರ್ಣಿಸುವುದು ಈ ಕವನದ ವಸ್ತುವಾಗಿದೆ. ಆರಂಭದಲ್ಲಿ ಸುನಾಮಿಯ ಭೀಕರತೆಯನ್ನು ಭೂಮಿಯೊಳಗಿನ ಜಲದ ತೆರೆ ಸರಿಯುವುದು ಎಂದಿದ್ದಾರೆ ಕವಯತ್ರಿ, ಜಲದ ತೆರೆ ಸರಿದಿರುವುದರಿಂದ ಅದು ಸೃಷ್ಟಿಯನ್ನೇ ಒಳಗೊಳಗೆ ನುಂಗುವುದು, ಮಣ್ಣಿನ ಪದರ ಕುಸಿಯುವುದು. ಪರಿಣಾಮವಾಗಿ ಎಲ್ಲಾ ಜೀವಚರಗಳು ಸಮಾಧಿಗೆ ಸೇರುವುವು. ಇದನ್ನು ಕಣ್ಣಾರೆ ಕಂಡರೂ ನಂಬಲು ಅಸಾಧ್ಯ, ಸುನಾಮಿಯ ಕಾರಣವು ಅಗೋಚರವೂ ಅನೂಹ್ಯವೂ ಆಗಿ ಭಯವನ್ನು ಹುಟ್ಟಿಸುವಂತದ್ದು ಮೊಸಳೆ ಬಾಯಿ ತೆರೆದಂತೆ ಜಲದ ಕಣ್ಣು ತೆರೆದಿದೆ ಎಂಬ ಉಪಮೆ ಇಲ್ಲಿ ಪ್ರಯೋಗಗೊಳ್ಳುವ ಮೂಲಕ ಒಂದು ಭಯದ ಸನ್ನಿವೇಶವನ್ನು ಕವಯತ್ರಿ ನಮ್ಮ ಮುಂದೆ ತಂದಿದ್ದಾರೆ. ಮೊಸಳೆ ಬಾಯಿ ತೆರೆದಾಗ ಎಲ್ಲವೂ ಅದರ ಒಳಗೆ ಸಿಲುಕಿ ಕೊಳ್ಳುವಂತೆ ಸೃಷ್ಟಿಯು ಸುನಾಮಿ ಎಂಬ ಮೊಸಳೆಯ ಬಾಯಿಗೆ ಆಹುತಿಗೊಂಡಿದೆ ಎಂಬ ವಿಚಾರವನ್ನು ಪ್ರತಿಪಾದಿಸಲಾಗಿದೆ. ಅತಿವೃಷ್ಟಿ, ಅನಾವೃಷ್ಟಿ, ಗುಡ್ಡ ಕುಸಿತ ಇತ್ಯಾದಿಗಳೆಲ್ಲವೂ ಮಾನವ ನಿರ್ಮಿತ ಪ್ರಕೃತಿ ದುರಂತಗಳೇ ಆಗಿವೆ. ಅರಣ್ಯ ರಕ್ಷಣೆ, ಗುಡ್ಡವನ್ನು ಅಗೆದು ಬಯಲು ಪ್ರದೇಶ ಮಾಡದೇ ಇರುವುದು, ಸಾಂಪ್ರದಾಯಿಕ ಜಲಮೂಲಗಳನ್ನು ಅವಲಂಬಿಸುವುದು ಇತ್ಯಾದಿಗಳ ಮೂಲಕ ಈ ದುರಂತಗಳಿಂದ ರಕ್ಷಣೆಯನ್ನು ಪಡೆಯಬಹುದು. | 4 | 4 |
| 19 | ಬೆಕ್ಕು ಮುಖ ತೊಳೆದರೆ ನೆಂಟರು ಬರುತ್ತಾರೆ, ಶಕುನದ ಹಕ್ಕಿ ಕೂಗಿದರೆ ಅಪಶಕುನ ಉಂಟಾಗುತ್ತದೆ, ಮಜ್ಜಿಗೆಯಲ್ಲಿ ಬೆಣ್ಣೆ ಮುಳುಗಿದರೆ ಪ್ರಳಯ ಆಗುತ್ತದೆ ಇತ್ಯಾದಿ ವಿವಿಧ ಮೂಢನಂಬಿಕೆಗಳನ್ನು ಪಾಠದಲ್ಲಿ ವಿವರಿಸಲಾಗಿದೆ. ಈ ನಂಬಿಕೆಗಳು ಮೂಢನಂಬಿಕೆಗಳೆಂದು ತಿಳಿದರೂ ಅದನ್ನು ಧಿಕ್ಕರಿಸುವುದಕ್ಕೆ ಜನ ಭಯಗೊಳ್ಳುತ್ತಾರೆ. | 4 | 4 |
| 20 | ಧರ್ಮಬುದ್ಧಿಯು ವ್ಯಾಪಾರಿ ಆದರೂ ಕಪಟವರಿಯದ ಸತ್ಯವಂತ, ಆಧ್ಯಾತ್ಮಿಕ ಮನೋಭಾವವುಳ್ಳವನು. ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯಕರ್ಮಗಳನ್ನು ಮುಗಿಸಿ ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜಿಸುವವನು. ದುಷ್ಟಬುದ್ಧಿಯು ಮರದ ಪೊಟರೆಯೊಳಗೆ ತಂದೆಯನ್ನು ಕೂರಿಸಿ ಧರ್ಮಬುದ್ಧಿಯೇ ಚಿನ್ನ ಕದ್ದನೆಂದು ಹೇಳಿಸಿದಾಗಲೂ | 4 | 4 |

| | | | |
|---|---|---|---|
| | ಆತ ಕೂಗಾಡಲಿಲ್ಲ, ಶಾಂತನಾಗಿಯೇ ಇದ್ದನು. ಅವನಿಗೆ ದೇವರ ಮೇಲೆ ನಂಬಿಕೆ. ದೇವರಿದ್ದರೆ ಸತ್ಯವೇ ಹೊರಬರಬೇಕಿತ್ತು ಎಂಬುದು ಅವನ ಅನಿಸಿಕೆ. ಮರವನ್ನು ಪರೀಕ್ಷಿಸಬೇಕೆಂದು ಮರವನ್ನು ಸುತ್ತಿದಾಗ ಮನುಷ್ಯ ಸಂಚಾರವಾಗಿರುವುದನ್ನು ಬುದ್ಧಿವಂತಿಕೆಯಿಂದ ಕಂಡುಕೊಂಡನು. ದುಷ್ಟಬುದ್ಧಿಗೆ ಬುದ್ಧಿ ಕಲಿಸುವ ಚಾಣಾಕ್ಷತನವನ್ನು ಮೆರೆಯುತ್ತಾನೆ. "ಸುಳ್ಳನ್ನು ಸುಳ್ಳಿನಿಂದಲೇ; ಮುಳ್ಳನ್ನು ಮುಳ್ಳಿನಿಂದಲೇ ಜಯಿಸುವಂತೆ" ಧರ್ಮಬುದ್ಧಿಯು ತಂತ್ರಬುದ್ಧಿಯಿಂದ ತನಗೆ ಒದಗಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿ ಕೊಂಡನು. ಇದರಿಂದ ಧರ್ಮಬುದ್ಧಿ ಮೆಚ್ಚುಗೆಗೆ ಪಾತ್ರನಾಗುತ್ತಾನೆ. | | |
| 21 | ಭೂತಾರಾಧನೆ ಮತ್ತು ತೆಯ್ಯಂ ಒಂದೇ ಆಗಿದ್ದರೂ ಇವುಗಳನ್ನು ಕಟ್ಟಿ ಆಡಿಸುವ ಕ್ರಮ, ಆಚರಣೆಯಲ್ಲಿ ತುಳು ಮತ್ತು ಮಲಯಾಳ ಸಂಪ್ರದಾಯಗಳಲ್ಲಿ ವ್ಯತ್ಯಾಸವಿದೆ. ಭೂತಾರಾಧನೆ ಒಂದು ಸಮಷ್ಟಿ ಕಲೆ. ಅದರಲ್ಲಿ ಭೂತ ಕಟ್ಟುವ ಕಲಾವಿದರಿರುತ್ತಾರೆ. ಭೂತದ ಪಾತ್ರಿಗಳಿರುತ್ತಾರೆ. ಭೂತದ 'ಮಾನಿ'ಯರಿರುತ್ತಾರೆ. ತೆಂಬರೆ ಅಥವಾ ಇತರ ವಾದ್ಯ ಪರಿಕರಗಳನ್ನು ನುಡಿಸುತ್ತಾ ಭೂತದ ಸಂಧಿ-ಪಾಡ್ದನಗಳನ್ನು ಹಾಡುವ ಕಲಾವಿದ ಬಳಗದವರಿರುತ್ತಾರೆ. ಹಿಮ್ಮೇಳದವರಿರುತ್ತಾರೆ. ಭಕ್ತ ಸಮೂಹದವರಿರುತ್ತಾರೆ. ಇವೆಲ್ಲರ ಪಾಲ್ಗೊಳ್ಳುವಿಕೆಯಿಂದ ಭೂತಾರಾಧನೆಯು ಅರ್ಥವನ್ನು ಪಡೆದುಕೊಳ್ಳುತ್ತದೆ. ತುಳುನಾಡಿನ ನಲಿಕೆಯವರು, ಪರವರು, ಪಂಬದರು, ಪಾಣಾರರು ಮುಂತಾದ ಪಂಗಡದವರು ಭೂತಗಳನ್ನು ಕಟ್ಟುತ್ತಾರೆ. ಉಡುಪಿ, ದಕ್ಷಿಣ ಕನ್ನಡ, ಕಾಸರಗೋಡು ಪ್ರದೇಶಗಳಲ್ಲಿ ಈ ಆರಾಧನಾ ಕಲೆ ಪ್ರಚಲಿತದಲ್ಲಿದೆ. ತುಳುವಿನ ದೆಯ್ಯೊ ಕೇರಳದಲ್ಲಿ ತೆಯ್ಯಂ ಆಗಿದೆ. ಮಲಯನ್, ವಣ್ಣಾನ್, ಮಾವಿಲನ್, ವೇಲನ್ ಮೊದಲಾದ ಪಂಗಡದವರು ತೆಯ್ಯಂನ್ನು ಕಟ್ಟಿ ಆಡುತ್ತಾರೆ. ದೇವಾಲಯಗಳಲ್ಲಿ, ತರವಾಡು ಮನೆಗಳಲ್ಲಿ, ದೈವಸ್ಥಾನಗಳಲ್ಲಿ ಆಚರಿಸುವ ಧಾರ್ಮಿಕ ಕಲೆಯಾಗಿದೆ ತೆಯ್ಯಂ. ಭೂತಾರಾಧನೆಯಂತೆ ತೆಯ್ಯಂ ಆರಾಧನೆ ಕೂಡಾ ಸಮಷ್ಟಿ ಕಲೆಯಾಗಿದೆ. ಭೂತಾರಾಧನೆಯಲ್ಲಿ ಪಾಡ್ದನಗಳನ್ನು ಹಾಡಿದಂತೆ ಇಲ್ಲಿ ತೋತ್ತಂಗಳನ್ನು ಹಾಡಲಾಗುತ್ತದೆ. ತೆಯ್ಯಂ ನರ್ತನ ಕಲೆಯನ್ನು ಉತ್ತರ ಮಲಬಾರು ಎಂದು ಕರೆಯಲ್ಪಡುವ ಕಾಸರಗೋಡಿನಿಂದ ದಕ್ಷಿಣಕ್ಕೆ ತಲಶ್ಶೇರಿ ತನಕ 'ತೆಯ್ಯಂ' ಎಂದೂ, ಅಲ್ಲಿಂದ ಕಲ್ಲಿಕೋಟೆಯವರೆಗೆ 'ತಿರ' ಎಂದೂ ಕರೆಯಲಾಗುತ್ತದೆ | 4 | 4 |
| 22 | ಸೂಕ್ತವಾದ ಕರಪತ್ರವೊಂದನ್ನು ಬರೆದಿರಬೇಕು. | 4 | 4 |
| 23 | ಕೊಟ್ಟಿರುವ ಪದ್ಯದ ಸಾಲುಗಳ ಆಸ್ವಾದನ ಟಿಪ್ಪಣಿಯನ್ನು ವಿವರಿಸಿ ಬರೆದಿರಬೇಕು | 6 | 6 |

| | | | |
|---|---|---|---|
| 24 | ಪ್ರವಾಸದ ಅನುಭವಗಳನ್ನು ವಿವರಿಸಿ ಬರೆದಿರಬೇಕು | 6 | 6 |
| 25 | ಕಿನ್ನಾ ಗ್ರಾಮವು ಬರಗಾಲಕ್ಕೆ ತುತ್ತಾದಾಗ ಅನೇಕರು ಕೊಳವೆ ಬಾವಿ ತೋಡಲು ಸೂಚಿಸಿದರು. ಆದರೆ ಖಾದ್ರಿಕಾಕನು ತನ್ನ ಸಾಹಸದಿಂದ ಸಾಂಪ್ರದಾಯಿಕ ಜಲಮೂಲವಾದ ಸುರಂಗವನ್ನು ತೋಡಿ ನೀರನ್ನು ಬರಿಸುತ್ತಾನೆ. ಆ ಮೂಲಕ ಸಾಂಪ್ರದಾಯಿಕ ಜಲ ಸಂಪನ್ಮೂಲವೇ ಶ್ರೇಷ್ಠ ಎನ್ನುವುದನ್ನು ಸಾರುತ್ತಾನೆ. | 6 | 6 |
| 26 | ಕುಂ. ವೀರಭದ್ರಪ್ಪನವರ ಹುಗ್ಗಿ ಕಥೆಯಲ್ಲಿ ಬಡ ಕುಟುಂಬದ ಹಸಿವಿನ ಭೀಕರತೆ ಮತ್ತು ಬಾಲಕಾರ್ಮಿಕತನದ ಚಿತ್ರಣವಿದೆ. ಅಪ್ಪ ಊರಿಂದ ಬಂದಕೂಡಲೇ ಅವನು ತಿನ್ನಲು ಏನಾದರೂ ತಂದಿರಬಹುದೆಂದು ಆಸೆಯಿಂದ ಓಡಿಬರುವ ಬಸವನಿಗೆ ಕಳೆದ ಒಂದು ದಿನದಿಂದ ಹೊಟ್ಟೆಗೆ ಏನೂ ಇರಲಿಲ್ಲ. ಅಪ್ಪನ ಮುಖವು ಸಪ್ಪಗಾಗಿತ್ತು. ಅಮ್ಮನ ಬಳಿಗೆ ಬಂದು ಸಣ್ಣದಾದ ಒಂದು ಬೆಲ್ಲದ ಚೂರನ್ನು ತಿಂದಾಗ ಅವನಿಗೆ ಹೊಟ್ಟೆ ತುಂಬಿದಂತೆ ಅನಿಸಿತು. ಅವನ ತಮ್ಮ ತಂಗಿಯರು ಬೆಲ್ಲದ ಮೊರದ ಸುತ್ತ ಆಸೆಯಿಂದ ಕುಳಿತಿದ್ದರು. ಮಕ್ಕಳ ಹಸಿವನ್ನು ನೀಗಿಸಲು ಆಗದ ಅಮ್ಮ ಅಳುತ್ತಿದ್ದಳು. ಬಡತನವು ಕೆಲವೊಮ್ಮೆ ಮನುಷ್ಯನ ಆತ್ಮಾಭಿಮಾನವನ್ನು ನಾಶಗೊಳಿಸುತ್ತದೆ. ಆದುದರಿಂದಲೇ ಬಸವನು ಹಿಂದಿನ ದಿನ ಸೊಚ್ಚ ಕೋಳಿಗೆ ಗತಿ ಇಲ್ಲೋನೆ ಎಂದು ಹೇಳಿದುದನ್ನು ನೆನಪಿಸಿ ಇಂದು ಅವನಲ್ಲಿ ನಮ್ಮ ಮನೆಯಲ್ಲಿ ಹುಗ್ಗಿ ಮಾಡುತ್ತಾರೆ ಎಂದು ಜಂಭದಿಂದ ಕೊಚ್ಚಿ ಕೊಳ್ಳುತ್ತಾನೆ. ಇಲ್ಲಿ ಉಪವಾಸ ಸಾಯೋದಕ್ಕಿಂತ ಎಲ್ಲಿಗಾದರೂ ಹಾಳಾಗಿ ಹೋಗೋಣ ಎಂದು ಅಪ್ಪ ಹಿಂದಿನ ದಿನವಷ್ಟೇ ಅಮ್ಮನಲ್ಲಿ ಹೇಳಿದ ವಿಚಾರವನ್ನು ಯೋಚಿಸಿದವನು ಅವರು ತನ್ನನ್ನು ಬಿಟ್ಟು ಊರಿಗೆ ಹೋಗುತ್ತಾರೆ ಎಂದು ತಿಳಿದು ದುಃಖಿಸುತ್ತಾನೆ. ಗುಂಡಾಲನ್ನು ಗೌಡರಿಗೆ ಕೊಡಲು ಹೇಳಿದಾಗ ಬಸವ ಹುಗ್ಗಿ ತಿನ್ನದೆ ಹೋಗಲು ತಯಾರಿರಲಿಲ್ಲ. ಬಹುಶಃ ತಿನ್ನೋದಕ್ಕಿಂತ ಮೊದಲು ಗುಂಡಾಲನ್ನು ಹೊರಲು ಹಸಿವಿನಿಂದ ಕೂಡಿದ ಬಸವನಿಗೆ ಸಾಧ್ಯವಾಗುತ್ತಿರಲಿಲ್ಲವೇನೋ? ಅಲ್ಲಿಯೂ ಅವನ ಅಪ್ಪ ಗೌಡರ ಸಾಲವನ್ನು ತೀರಿಸಲು ಬಸವನನ್ನು ಜೀತಕ್ಕೆ ಇರಿಸಲು ಒಪ್ಪಿದ್ದರಲ್ಲಿ ಆ ಬಡತನದ ಬೇಗೆ ಎಷ್ಟು ಎಂಬುದನ್ನು ಗಮನಿಸಬಹುದು. | 6 | 6 |
| 27 | ಮಂಕುತಿಮ್ಮನ ಕಗ್ಗದ ಸಾಲುಗಳಲ್ಲಿ ವ್ಯಕ್ತವಾದ ಜೀವನಮೌಲ್ಯಗಳನ್ನು ವಿವರಿಸಿ ಬರೆದಿರಬೇಕು. | 6 | 6 |
| 28 | ಕೃಷ್ಣನು ಕರ್ಣನನ್ನು ಕರೆದು ರಥದಲ್ಲಿ ತನ್ನ ಬಳಿಯಲ್ಲಿ ಕುಳ್ಳಿರಿಸಿ ಕರ್ಣನ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸುತ್ತಾನೆ. ನಮ್ಮ ನಡುವೆ ಯಾವುದೇ ಭೇದ ಭಾವವಿಲ್ಲ, ನಾವಿಬ್ಬರೂ ಸಮಾನರು, ಕುಂತಿ ಪಡೆದ ಐದು ಮಂತ್ರಗಳಲ್ಲಿ ನೀನು ಮೊದಲಿಗ ಎಂದು ಆತನ ಜನ್ಮ ರಹಸ್ಯವನ್ನು | 8 | 8 |

| | | | |
|---|---|---|---|
| | ತಿಳಿಸುತ್ತಾನೆ, ಅದಕ್ಕೆ ಕರ್ಣನು ನಾನು ವಂಶವಿಹೀನನು, ನನ್ನನ್ನು ನಿಮ್ಮೊಂದಿಗೆ ಸಮಾನವಾಗಿ ಕಾಣುವುದು ಸರಿಯಲ್ಲ ಎನ್ನುತ್ತಾನೆ. ಇಬ್ಬರ ಸಂಭಾಷಣೆ ಕಾವ್ಯದಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.<br>**ಅಥವಾ**<br>ಬಕನ ಉಪಟಳದಿಂದ ಏಕಚಕ್ರ ನಗರದ ಜನರು ನೆಮ್ಮದಿಯನ್ನು ಕಳೆದುಕೊಳ್ಳುತ್ತಾರೆ. ರಾಜನಿಗೆ ಅವನನ್ನು ಎದುರಿಸಲಾಗದೆ ಆತನೊಂದಿಗೆ ಒಪ್ಪಂದಕ್ಕೆ ತಯಾರಾಗುತ್ತಾನೆ. ಪ್ರಜೆಗಳ ವಿರೋಧವಿದ್ದರೂ ಬಕನಿದ್ದಲ್ಲಿಗೇ ಆಹಾರವನ್ನು ಒದಗಿಸಿಕೊಡುವ ಒಪ್ಪಂದಕ್ಕೆ ರಾಜ ಸಹಿ ಹಾಕುತ್ತಾನೆ. ಇದನ್ನೇ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡ ವರ್ತಕರು ಜನರನ್ನು ವಿವಿಧ ರೀತಿಯಿಂದ ಶೋಷಣೆಗೆ ಒಳಪಡಿಸುತ್ತಾರೆ. ನಗರಪಾಲಕನೂ ಕೂಡಾ ಹಣದ ಆಸೆಗೆ ಬಲಿಬಿದ್ದು ಲಂಚವನ್ನು ಪಡೆಯುತ್ತಾನೆ. ಲಂಚ, ಭ್ರಷ್ಟಾಚಾರ ತಾಂಡವವಾಡುತ್ತದೆ. ಆಧುನಿಕ ಸಮಾಜದಲ್ಲೂ ಇದರ ಕರಿನೆರಳು ಕಾಣಿಸಿಕೊಂಡಿದೆ. | | |